**O.S.242-24** **PW : 2**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 23.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ R G K, ವಕೀಲರಿಂದಃ**

**3. ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರಪಡಿಸಿದ್ದೇನೆ.**

ದಿಃ 25.7.1983 ರಂದು ಆದ 2-ಖರೀದಿ ಪತ್ರಗಳನ್ನು ನಿಪಿ.6 ಹಾಗೂ 7 ಎಂದು ಗುರುತಿಸಲಾಯಿತು.

ದಿಃ 13.11.1937 ರಂದು ಆದ ಖರೀದಿ ಪತ್ರವನ್ನು ನಿಪಿ.8 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ G N B,ವಕೀಲರಿಂದಃ**

ನಿಪಿ.6 ಹಾಗೂ 7 ರಲ್ಲಿರುವ ಆಸ್ತಿಗಳನ್ನು ನಮ್ಮ ತಂದೆ ಖರೀದಿ ಮಾಡಿದ್ದಾರೆ ಅಂದರೆ ಸರಿ. ನಿಪಿ.8 ರಲ್ಲಿರುವ ಆಸ್ತಿಯನ್ನು ನಮ್ಮ ತಂದೆಯ ತಂದೆ ಖರೀದಿ ಮಾಡಿದ್ದಾರೆ. ಅದು ಮನೆ ಜಾಗ ಅಂದರೆ ಸರಿ. ದಾವಾ ಆಸ್ತಿಗಳು ನನ್ನ ಹಾಗೂ ನನ್ನ ಅಣ್ಣನ ಹೆಸರಿನಲ್ಲಿ ನಮ್ಮ ತಂದೆ ಜೀವಂತವಿದ್ದಾಗ ಆಗಿವೆ ಅಂದರೆ ಸರಿ. ನಮ್ಮ ತಂದೆ ಜೀವಂತವಿದ್ದಾಗ ಜಗಳ ಬರಬಾರದೆಂದು ಒಂದೊಂದು ಆಸ್ತಿಯನ್ನು ಒಬ್ಬೊಬ್ಬರ ಹೆಸರಿನಲ್ಲಿ ಮಾಡಿದ್ದಾರೆ ಅಂದರೆ ಸರಿ. ನಾವು ಆ ಕಾಲಕ್ಕೆ ಅಪ್ರಾಪ್ತ ಇರುವುದರಿಂದ ನಮ್ಮ ತಾಯಿಯನ್ನು ಅಲ್ಪವಯಿ ಸಂರಕ್ಷಣಧಾರಳೆಂದು ಮಾಡಿದ್ದಾರೆ ಅಂದರೆ ಸರಿ. ನಮ್ಮ ತಂದೆ ಆಸ್ತಿ ಹಂಚಿಕೆ ಮಾಡಿರುವುದರಿಂದ ಅಕ್ಕ-ತಂಗಿಯರಿಗೆ ಹಕ್ಕು ಇಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

(ಯಮನಪ್ಪ ಕರೆಹನುಮಂತಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.